ಕರ್ನಾಟಕ ವಿಧಾನಸಭೆ

ಗುರುವಾರ 2ನೇ ಮಾರ್ಚ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 12 ಗಂಟೆ 36 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ವಿಷಯ: ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಮಂಡಿಸುವ ಬಗ್ಗೆ.

ಅಧ್ಯಕ್ಷರು: ಈಗ ಸಭೆಯ ಮುಂದೆ ಇಡಲಾಗುವ ಕಾಗದ ಪತ್ರಗಳ ಮಂಡನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಯಾವ ಕಾಗದ ಪತ್ರಗಳನ್ನು ಮಂಡಿಸ ಬೇಡಿ. ಈಗ ಸೇರಿರುವ ಸಭೆ ಸರಿ ಇಲ್ಲ. ಮೊದಲು ಅದನ್ನು ಸರಿಪಡಿಸಿ . . . (ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಹಾಗೂ ಕಾಂಗ್ರೆಸ್ ಪಕ್ಷದ ವಿಧಾನಸಭೆಯ ಸದಸ್ಯರೆಲ್ಲರೂ ಸದನದ ಬಾವಿಗೆ ಬಂದು ಸರ್ಕಾರದ ವಿರುದ್ಧ ಮತ್ತು ಮಾನ್ಯ ಸಭಾಧ್ಯಕ್ಷರ ನಿಲುವಿಗೆ ಧಿಕ್ಕಾರ ಎಂದು ಕೂಗುತ್ತಿದ್ದರು)

ಅಧ್ಯಕ್ಷರು: ಸದನದ ಬಾವಿಯಲ್ಲಿರುವ ಮಾನ್ಯ ಸದಸ್ಯರೆಲ್ಲರೂ ಗಲಾಟೆ ಮಾಡದೆ ಎಲ್ಲರೂ ನಮ್ಮ ತಮ್ಮ ಸ್ಥಾನಕ್ಕೆ ಹೋಗಬೇಕು. ನಿನ್ನೆ, ಮೊನ್ನೆ ಮತ್ತು ಆಚೆಮೊನ್ನೆ ಬಹಳಷ್ಟು ಚರ್ಚೆ ಈಗಾಗಲೇ ಈ ಮನೆಯಲ್ಲಿ ನಡೆದಿದೆ. ಲೋಕಸಭೆ ಹಾಗೂ ರಾಜ್ಯಸಭೆ ಸಚಿವಾಲಯಕ್ಕೂ ಪತ್ರ ಬರೆದು ಕೇಳಿದ್ದೇವೆ. ಆ ಪತ್ರಗಳಲ್ಲಿ ಏನು ಹೇಳಲಾಗಿದೆ ಅಂದರೆ, ...

Now, after the formation of the new Government, headed by Sri H.D. Kumaraswamy, Chief Minister of Karnataka, His Excellency the Governor of Karnataka under Article 175(1) of the Constitution of India, have pleased to address members of both Houses of Karnataka Legislature on 24.2.2006 at 10.00 A.M.

In the light of these developments, since there will be two addresses by His Excellency the Governor of Karnataka successively, I request you to kindly give your considered opinion **as to which Governor's Address has to be taken for moving the Motion of Thanks.** ಈ ಪತ್ರಕ್ಕೆ ಲೋಕಸಭಾ ಸಚಿವಾಲಯದವರು ಈ ರೀತಿ ಉತ್ತರ ನೀಡಿದ್ದಾರೆ.